# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 397
2. ಸದಸ್ಯರ ಹೆಸರು : ಶ್ರೀ ಕೆ. ಎ. ತಿಪ್ಪೇಸ್ವಾಮಿ
3. ಉತ್ತರಿಸಬೇಕಾದ ದಿನಾಂಕ : 07.12.2023
4. ಉತ್ತರಿಸಬೇಕಾದ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ರಾಜ್ಯದಲ್ಲಿರುವ ಕಾವೇರಿ ಕೊಳ್ಳದ ವ್ಯಾಪ್ತಿಯಲ್ಲಿ ಬರುವ ಪ್ರಮುಖ ನದಿ ಮತ್ತು ಉಪ ನದಿಗಳು ಯಾವುವು; ಈ ನದಿಗಳ ಉಗಮ ಮತ್ತು ತದನಂತರ ಸೇರಿಕೊಳ್ಳುವ ನದಿಗಳು ಒಳಗೊಂಡಂತೆ ಪೂರ್ಣ ವಿವರ ನೀಡುವುದು; | ವಿವರಗಳನ್ನು **ಅನುಬಂಧ** ದಲ್ಲಿ ಒದಗಿಸಲಾಗಿದೆ. |
| (ಆ) | ಕಾವೇರಿ ಕೊಳ್ಳದಲ್ಲಿರುವ ಪ್ರಮುಖ ನದಿ ಮತ್ತು ಉಪ ನದಿಗಳಿಗೆ ಅಡ್ಡಲಾಗಿ ನಿರ್ಮಿಸಿರುವ ಜಲಾಶಯಗಳು ಯಾವುವು; ಈ ಜಲಾಶಯಗಳ ನಿರ್ಮಾಣದ ವರ್ಷ, ಜಲಾಶಯದ ಸಾಮರ್ಥ್ಯ ಮತ್ತು ಅಚ್ಚುಕಟ್ಟು ಪ್ರದೇಶ ಒಳಗೊಂಡಂತೆ ಪೂರ್ಣ ಮಾಹಿತಿ ನೀಡುವುದು; | |
| (ಇ) | ಕಾವೇರಿ ಕೊಳ್ಳದಲ್ಲಿರುವ ಹಲವಾರು ದೊಡ್ಡ ಮತ್ತು ಕಿರು ಜಲಾಶಯಗಳು ಶತಮಾನಗಳಷ್ಟು ಹಳೇ ಜಲಾಶಯಗಳಾಗಿದ್ದು, ಹೂಳು, ಕೊಳಚೆ ಮತ್ತು ಒತ್ತುವರಿಯಿಂದ ತುಂಬಿ ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಜಲಾಶಯಗಳನ್ನು ಪುನಶ್ಚೇತನಗೊಳಿಸಲು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು) | ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಯ ಜಲಾಶಯಗಳಲ್ಲಿ ತುಂಬಿರುವ ಹೂಳಿನ ಪರಿಮಾಣವನ್ನು ಹೈಡ್ರೋಗ್ರಾಫಿಕ್ ಸರ್ವೆ ಮುಖಾಂತರ ಅಂದಾಜು ಮಾಡಲಾಗಿದೆ.<br><br>ಅದರಂತೆ, ಹಾರಂಗಿ ಜಲಾಶಯ ಹೊರತು ಪಡಿಸಿ ಕೃಷ್ಣರಾಜಸಾಗರ, ಕಬಿನಿ ಮತ್ತು ಹೇಮಾವತಿ ಜಲಾಶಯಗಳಲ್ಲಿ ನೀರು ಮಿಶ್ರಿತ ಹೂಳು ಇದ್ದು, River Sluice ಮತ್ತು scour sluice ಮುಖಾಂತರ ನೀರನ್ನು ನದಿಗೆ ಹರಿಸಿದಾಗ ನೀರು ಮಿಶ್ರಿತ ಹೂಳು ನದಿಯಲ್ಲಿ ಕೊಚ್ಚಿ ಹೋಗುವುದರಿಂದ ಈ ಜಲಾಶಯಗಳಲ್ಲಿ ಹೂಳನ್ನು ತೆಗೆಯುವ ಅವಶ್ಯಕತೆ ಕಂಡುಬಂದಿರುವುದಿಲ್ಲ.<br><br>ಮುಂದುವರೆದು, ಹಾರಂಗಿ ಜಲಾನಯನದಲ್ಲಿ ಸಂಗ್ರಹವಾಗಿರುವ ಹೂಳನ್ನು ಒಳಗೊಂಡಂತೆ ನದಿ ಪಾತ್ರದ ಪುನಶ್ಚೇತನ ಹಾಗೂ ರಕ್ಷಣಾ ಕಾಮಗಾರಿಯ ರೂ.130.00 ಕೋಟಿ ಮೊತ್ತದ ಕಾಮಗಾರಿಯು ಪ್ರಗತಿಯಲ್ಲಿದ್ದು, ರೂ.39.00 ಕೋಟಿ ಮೊತ್ತದಲ್ಲಿ 0.031 ಟಿ.ಎಂ.ಸಿ ಹೂಳನ್ನು ತೆಗೆಯಲು ಯೋಜಿಸಲಾಗಿದೆ. |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| | | ಕಾವೇರಿ ಕಣಿವೆಯಲ್ಲಿನ ಬೃಹತ್ ಜಲಾಶಯಗಳಲ್ಲಿ ಒತ್ತುವರಿ ಕುರಿತಂತೆ ಸರ್ವೆ ನಡೆಸಲು ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಸಂಸ್ಥೆಯನ್ನು ಕೋರಿದ್ದು, ವರದಿ ಸ್ವೀಕೃತವಾದ ನಂತರ ಈ ಕುರಿತಂತೆ ಕ್ರಮ ಕೈಗೊಳ್ಳಲಾಗುವುದು. |
| (ಈ) | ಕಾವೇರಿ ಕೊಳ್ಳದಲ್ಲಿರುವ ಕೆಲವು ಬೃಹತ್ ಜಲಾಶಯಗಳ ಅಣೆಕಟ್ಟೆಗಳು ಶಿಥಿಲ ಅವಸ್ಥೆಯಲ್ಲಿದ್ದು, ರಾಜ್ಯ ಸರ್ಕಾರ ಕೇಂದ್ರದ ಜಲಾಶಯದ ಸುರಕ್ಷತೆ ಕಾಯಿದೆ ಅಡಿ ಕೈಗೊಂಡಿರುವ ಜಲಾಶಯ ರಕ್ಷಣೆ ಕಾಮಗಾರಿಗಳು ಯಾವುವು? (ಪೂರ್ಣ ಮಾಹಿತಿ ನೀಡುವುದು) | ಅಣೆಕಟ್ಟು ಸುರಕ್ಷತೆ ಕಾಯ್ದೆ ಅಡಿಯಲ್ಲಿ Dam Rehabilitation Improvement Programme (DRIP) ಯೋಜನೆ ಅಡಿಯಲ್ಲಿ ಅಣೆಕಟ್ಟುಗಳನ್ನು ಸುಸ್ಥಿತಿಯಲ್ಲಿಡಲು ಹಾಗೂ ಸುಗಮ ಕಾರ್ಯಾಚರಣೆಗಾಗಿ ಅಣೆಕಟ್ಟುಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.<br><br>ವಿಶ್ವ ಬ್ಯಾಂಕ್ ಸಾಲದ ನೆರವಿನ DRIP ಹಂತ-1 ರಡಿ ಕೃಷ್ಣರಾಜಸಾಗರ, ಕಬಿನಿ, ಹಾರಂಗಿ, ಹೇಮಾವತಿ, ವೊಟೆಹೊಳೆ, ಚಿಕ್ಲಿಹೊಳೆ ಹಾಗೂ ಮಲ್ಲಘಟ್ಟ, ಅಣೆಕಟ್ಟುಗಳ ಪುನಶ್ಚೇತನ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡು ಜೂನ್-2021 ರಲ್ಲಿ ಪೂರ್ಣಗೊಳಿಸಲಾಗಿದೆ.<br><br>ಮುಂದುವರೆದು, DRIP ಹಂತ-2 ರಡಿ ಕೃಷ್ಣರಾಜಸಾಗರ, ಹೇಮಾವತಿ, ವೊಟೆಹೊಳೆ ಹಾಗೂ ತಾರಕ ಅಣೆಕಟ್ಟುಗಳ ಪುನಶ್ಚೇತನ ಮತ್ತು ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿವೆ. |

***ಸಂಖ್ಯೆ: ಜಸಂಇ 68 ಎನ್‌ಎಲ್‌ಎ 2023***

**( ಡಿ. ಕೆ. ಶಿವಕುಮಾರ್ )**
**ಉಪ ಮುಖ್ಯಮಂತ್ರಿಗಳು**

# ಅನುಬಂಧ

| ಕ್ರ. ಸಂ | ನದಿ | ಉಗಮ ಸ್ಥಾನ | ಸೇರುವ ನದಿ | ನಿರ್ಮಿಸಿರುವ ಜಲಾಶಯದ ಹೆಸರು | ನಿರ್ಮಾಣದ ವರ್ಷ | ಜಲಾಶಯದ ಸಾಮರ್ಥ್ಯ (ಟಿ.ಎಂ.ಸಿ) | ಅಚ್ಚುಕಟ್ಟು ಪ್ರದೇಶ (ಎಕರೆಗಳಲ್ಲಿ) |
|---|---|---|---|---|---|---|---|
| | ಪ್ರಮುಖ ನದಿ | | | | | | |
| 1. | ಕಾವೇರಿ | ತಲಕಾವೇರಿ | ಕಾವೇರಿ | ಕೆ.ಆರ್.ಎಸ್ | 1931 | 49.452 | 1,95,972 |
| | ಉಪ ನದಿ | | | | | | |
| 1. | ಚಿಕ್ಲಿಹೊಳೆ | ಚಟ್ಟಹಳ್ಳಿ ಬೆಟ್ಟ | ಕಾವೇರಿ | ಚಿಕ್ಲಿಹೊಳೆ | 1985 | 0.180 | 4,200 |
| 2. | ಹಾರಂಗಿ | ಪುಷ್ಪಗಿರಿ ಬೆಟ್ಟ | ಕಾವೇರಿ | ಹಾರಂಗಿ | 1978 | 8.500 | 1,04,895 |
| 3. | ಲಕ್ಷ್ಮಣ ತೀರ್ಥ | ಬ್ರಹ್ಮಗಿರಿ ಬೆಟ್ಟ | ಕಾವೇರಿ | | | | |
| 4. | ಹೇಮಾವತಿ | ಪಶ್ಚಿಮ ಘಟ್ಟದ ಬಲ್ಲರಾಯನದುರ್ಗ | ಕಾವೇರಿ | ಹೇಮಾವತಿ | 1979-80 | 37.103 | 6,55,000 |
| | ಆ. ಯಗಚಿ | ರತ್ನಗಿರಿ ಚಿಕ್ಕಮಗಳೂರು | ಹೇಮಾವತಿ | ಯಗಚಿ | 2002-03 | 3.601 | 53,000 |
| | ಅ. ವಾಟೆಹೊಳೆ | ಬೇಲೂರು ತಾಲ್ಲೂಕಿನ ನಾಗೇನಹಳ್ಳಿ | ಯಗಚಿ | ವಾಟೆಹೊಳೆ | 1983-84 | 1.51 | 18,500 |
| 5. | ಕಬಿನಿ | ವಯನಾಡು ಜಿಲ್ಲೆ ಕೇರಳ | ಕಾವೇರಿ | ಕಬಿನಿ | 1978 | 19.516 | 1,13,000 |
| | ಅ. ತಾರಕ | ನಾಗರಹೊಳೆ | ಕಬಿನಿ | ತಾರಕ | 1978-79 | 3.940 | 17,400 |
| | ಆ. ಹೆಬ್ಬಳ್ಳ | ಹೆಚ್.ಡಿ ಕೋಟೆ | ತಾರಕ | ಹೆಬ್ಬಳ್ಳ | 1972 | 0.423 | 3,050 |
| | ಇ. ನುಗು | ನೆಲಂಬುರ್ (ಕೇರಳ) | ಕಬಿನಿ | ನುಗು | 1949 | 5.440 | 18,110 |
| | ಉ. ಗುಂಡ್ಲು | ಹಿಮವದ್ ಗೋಪಾಲಸ್ವಾಮಿ ಬೆಟ್ಟ | ಕಬಿನಿ | ನಲ್ಲೂರು ಅಮಾನಿಕೆರೆ | 1987 | 0.231 | 3,200 |
| 6. | ಸುವರ್ಣವತಿ | ನಾಸುರ್ ಘಾಟ್ | ಕಾವೇರಿ | ಸುವರ್ಣವತಿ | 1984 | 1.259 | 16,694 |
| | ಅ.ಚಿಕ್ಕಹೊಳೆ | ತಲ್ಲೈಮಲೈ & ಕೊಂಗಹಳ್ಳಿ ಬೆಟ್ಟ | ಸುವರ್ಣವತಿ | ಚಿಕ್ಕಹೊಳೆ | 1972 | 0.376 | 4,076 |

| | | | | | | | |
|---|---|---|---|---|---|---|---|
| 7. | ಗುಂಡಾಲ್ | ದೊಡ್ಡ ಸಂಪಿಗೆ ಬಿಳಿಗಿರಿ ರಂಗನಬೆಟ್ಟ | ಕಾವೇರಿ | ಗುಂಡಾಲ್ | 1980 | 0.969 | 7,100 |
| 8. | ಶಿಂಪಾ | ತುಮಕೂರಿನ ದೇವರಾಯದುರ್ಗ | ಕಾವೇರಿ | ಮಾರ್ಕೋನಹಳ್ಳಿ | 1940-41 | 2.401 | 15,000 |
| | | | | ಇಗ್ಗಲೂರು | 1985 | 0.182 | 3,650 |
| | ಅ. ವೀರವೈಷ್ಣವಿ | ನಾಗಮಂಗಲ ತಾಲ್ಲೂಕಿನ ಗಿಡುವಿನಹೊಸಹಳ್ಳಿ | ಶಿಂಪಾ | | | | |
| | ಆ. ಕಣ್ವ | ಮಾಗಡಿ ತಾಲ್ಲೂಕು | ಶಿಂಪಾ | ಕಣ್ವ | 1946 | 0.808 | 6,365 |
| | ಇ. ನಾಗಿಣಿ | ಶಿವಗಂಗೆ | ಶಿಂಪಾ | ಮಂಗಳ | 1969-70 | 0.530 | 2,320 |
| 9. | ಅರ್ಕಾವತಿ | ನಂದೀದುರ್ಗ | ಕಾವೇರಿ | ಅರ್ಕಾವತಿ | 1985 | 1.587 | 7,500 |
| | | | | ಮಂಚನಬೆಲೆ | 1985 | 1.222 | 9,500 |
| | ಅ. ವೃಷಭಾವತಿ | ದೊಡ್ಡ ಬಸವ ದೇವಸ್ಥಾನದ ಬಳಿ ಬೆಂಗಳೂರು ಗ್ರಾಮಾಂತರ | ಅರ್ಕಾವತಿ | ಬೈರಮಂಗಲ | 1943 | 0.747 | 4,000 |
| 10. | ಉಡುತೊರೆಹಳ್ಳ | ಹೊನ್ನಮೇಟಿ | ಕಾವೇರಿ | ಉಡುತೊರೆಹಳ್ಳ | 2010 | 0.670 | 16,300 |

ವ್ಯವಸ್ಥಾಪಕ ನಿರ್ದೇಶಕರು, ಕೃ.ಭ.ನಿ.
ಕಾನೀನಿನಿ, ಬೆಂಗಳೂರು